ಈ ದಿನ ಅವರನ್ನು ಯಾರೂ ಟೆರೇಸಿನಲ್ಲಿ ಹಿಂಬಾಲಿಸಿರಲಿಲ್ಲ.

ಇಬ್ಬರೂ ಕೆಳಗಿಳಿದು ಬಂದರು. ಋತು ಅಡುಗೆ ಮನೆಯತ್ತ ನಡೆದರೆ ಹೇಮಂತ ಅಕ್ವೇರಿಯಂನ ಮುಂದೆ ಕುಳಿತಿದ್ದ ಭರತನತ್ತ ನಡೆದಿದ್ದ. ಅವನನ್ನು ಮಾತನಾಡಿಸುವ ಪ್ರಯತ್ನದಲ್ಲಿದ್ದಾಗಲೇ ಕಲಾವತಿ, ರಮ್ಯ ಹಾಗೂ ಋತುವಿನೊಂದಿಗೆ ಹಿಂದಿರುಗಿದ್ದರು.

ಬಿಸಿ ಬಿಸಿಯಾದ ಹೀರೇಕಾಯಿ ಬೋಂಡಾ, ಸ್ಟ್ರಾಂಗ್ ಕಾಫಿ...ಚಳಿಯ ವಾತಾವರಣಕ್ಕೆ ಹೇಳಿ ಮಾಡಿಸಿದಂತಿತ್ತು. ಭರತನ ಪಕ್ಕದಲ್ಲೇ ಕುಳಿತ ಹೇಮಂತ ಹೆಚ್ಚು ಉಪಚರಿಸಿಕೊಳ್ಳದೆ ಬೋಂಡಾವನ್ನು ಖಾಲಿ ಮಾಡಿದ. ಕಲಾವತಿ ಬಿಸಿ ಕಾಫಿ ಕಪ್ಪನ್ನು ಅವನ ಕೈಗಿಡುವಾಗ ಆಕಸ್ಮಿಕವಾಗಿ ಆಕೆಯ ಕೈ ಅದುರಿ ಬಿಸಿ ಕಾಫಿ ಭರತನ ತಲೆಯ ಮೇಲೆ ಬಿತ್ತು. ಉಲ್ಲನ್ ಕ್ಯಾಪ್ ಇದ್ದುದರಿಂದ ಆಗುವ ಅನಾಹುತ ತಪ್ಪಿತ್ತು.

ಕಲಾವತಿ ಮರುಮಾತಾಡದೆ ಭರತನ ಕ್ಯಾಪ್ ಅನ್ನು ತೆಗೆದು ಮೂಲೆಯಲ್ಲಿಟ್ಟರು.

ಈ ದಿನ ಎಷ್ಟು ಹೊತ್ತಾದರೂ ಪುರುಷೋತ್ತಮರು ಬಂಗಲೆಗೆ ಹಿಂದಿರುಗಿರಲಿಲ್ಲ. ಎಲ್ಲರೂ ಲೋಕಾಭಿರಾಮವಾಗಿ ಮಾತನಾಡುತ್ತಾ ಕುಳಿತರು. ಋತುವಿನ ಭಯವೀಗ ಸಾಕಷ್ಟು ಕಡಿಮೆಯಾಗಿತ್ತು. ಹೇಮಂತ ನಿಗಾಗಿ ತಾನು ಬದಲಾಗಬೇಕು ಎಂಬ ಅವಳ ಮನಸ್ಸಿನ ಇಚ್ಛೆಯೇ ಅವಳನ್ನು ಧೈರ್ಯಶಾಲಿಯಾಗಿಸತೊಡಗಿತ್ತು.

ಹೇಮಂತ ಹೊರಡಲು ಅನುವಾದ. ಅವನನ್ನು ಬೀಳ್ಕೊಡಲು ಎಲ್ಲರೂ ಮೇಲೇಳುವ ವೇಳೆಗೆ ಫಳಾರೆಂದು ಗಾಜು ಒಡೆದ ಸದ್ದು ಹೊರಬಾಗಿಲಿನ ಸಮೀಪದಲ್ಲಿ ಕೇಳಿಸಿದಂತಾಯಿತು. ಎಲ್ಲರೂ ಆತಂಕದಿಂದ ಅತ್ತ ಧಾವಿಸಿದರು. ಅನುಮಾನವೇ ಇರಲಿಲ್ಲ. ಹೊರಬಾಗಿಲಿನ ಪಕ್ಕದ ಗಾಜಿನ ಕಿಟಕಿ ಒಡೆದಿತ್ತು. ದೊಡ್ಡದಾದ ಕಲ್ಲೊಂದು ಕಿಟಕಿಯ ಕೆಳಭಾಗದಲ್ಲಿ ಬಿದ್ದಿತ್ತು. ಅಂದರೆ... .ಯಾರೋ ಬೀಸಿ ಕಲ್ಲನ್ನು ಒಗೆದಿದ್ದಾರೆ!....ಈ ರಾತ್ರಿಯ ವೇಳೆಯಲ್ಲಿ ಕಿಟಕಿಯ ಗಾಜನ್ನು ಒಡೆಯುವ ದುಸ್ಸಾಹಸವನ್ನು ಯಾರು ಮಾಡಿರಬಹುದು?.. ಎಲ್ಲರಲ್ಲೂ ಪ್ರಶ್ನೆಗಳೇಳುತ್ತಿದ್ದವು. ಆದರೆ ಕೋಟೆಬಂಗಲೆಯಲ್ಲಿ ನಡೆಯುತ್ತಿರುವ ಘಟನೆಗಳಿಗೆಲ್ಲಾ ಉತ್ತರ ಮಾತ್ರ ಒಂದೇ....ಅದು ನಿಗೂಢ!

ಕಿಟಕಿಯ ಗಾಜು ಒಡೆದಿದ್ದನ್ನು ನೋಡಿತು ಹೇಮಂತನ ಪತ್ತೇದಾರ ತೀಕ್ಷ್ಣ ದೃಷ್ಟಿ. ಈಗ ಯಾವ ಮಾತನಾಡಿದರೂ ಅನರ್ಥವಾಗುವುದೆಂದು ಯೋಚಿಸಿ ಅವನು ಮಾತಿಲ್ಲದೆ ಹೊರಡಲು ಅನುವಾಗುವ ವೇಳೆಗೆ ಪೋರ್ಟಿಕೋದೊಳಗೆ ಪುರುಷೋತ್ತಮರ ಕಾರು ಬಂದು ನಿಂತಿತು.

ಅವರನ್ನು ಮಾತನಾಡಿಸಿ ಬಂಗಲೆಯಿಂದ ನಿರ್ಗಮಿಸಿದ ಹೇಮಂತ. ಅವನ ಬೈಕಿನ ಸದ್ದು ಅಡಗುವ ವೇಳೆಗೆ ಪುರುಷೋತ್ತಮರು ಹೊರಬಾಗಿಲಿನತ್ತ ಬಂದಿದ್ದರು. ಕಲಾವತಿ, ಋತು ಹಾಗೂ ರಮ್ಯ ಇನ್ನೂ ಅಲ್ಲಿಯೇ ಇದ್ದರು. ಅವರನ್ನು ನೋಡಿ ಆಶ್ಚರ್ಯದಿಂದ ಪುರುಷೋತ್ತಮರು ಕಣ್ಣರಳಿಸಿದರು.

'ಏನಾಯ್ತು ಕಲಾವತಿ, ಯಾಕೆ ಎಲ್ಲಾ ಹೀಗಿದ್ದೀರಿ?' ಹೆಂಡತಿಯನ್ನು ಪ್ರಶ್ನಿಸಿದರು.

'ಕಿಟಕಿಯ ಗಾಜು ಒಡೆದಿದೆ, ಯಾರೋ ಬೇಕೆಂದೇ ದೊಡ್ಡ ಕಲ್ಲೆಸೆದು ಗಾಜನ್ನು ಒಡೆದಿದ್ದಾರೆ.... ಕೋಪದಿಂದ ಮಾತನಾಡಿದರು ಕಲಾವತಿ.

ಈ ಹೇಮಂತ ಕೋಟೆ ಬಂಗಲೆಯ ಭಾವೀ ಅಳಿಯನಾದ್ಮೇಲೆ ದಿನಕ್ಕೊಂದು ರಾದ್ಧಾಂತ. ಅವ್ನನ್ನು ಮರೆತು ಬಿಡು ಅಂದ್ರೆ ಋತುವೂ ಹಟ ಮಾಡ್ತಾಳೆ, ನೀವೂ ಅವಳಿಗೇ ಸಪೋರ್ಟ್ ಮಾಡ್ತೀರಿ, ಎಲ್ಲಾ ನನ್ನ ಕರ್ಮ, ಎಲ್ಲರೂ ಹಾಳಾಗಿ ಹೋಗಿ...' ಎಂದವರು ಬಿರಬಿರನೆ ಬಂಗಲೆಯೊಳಕ್ಕೆ ನಡೆದರು.

'ಋತು, ಅವಳ ಮಾತಿಗೆ ನೀನು ತಲೆಕೆಡಿಸಿಕೊಳ್ಬೇಡ, ಯಾರೋ ಕಿಡಿಗೇಡಿಗಳು ಈ ಕೆಲಸ ಮಾಡಿರಬಹುದಲ್ವಾ?....ಕಾಲೇಜಿನ ಸರಣಿ ಕೊಲೆಗಳ ಕೊಲೆಗಾರನೊಬ್ಬ ಪತ್ತೆಯಾಗಿ ಬಿಟ್ರೆ ಹೇಮಂತನಿಗೂ ನೆಮ್ಮದಿ, ಮತ್ತೆ ತಡ ಮಾಡದೆ ನಿಮ್ಮಿಬ್ಬರ ಮದ್ವೆ ಮಾಡಿಬಿಡ್ಬೇಕು, ಆಗ ಕಲಾವತಿಯೂ ಸುಮ್ಮನಾಗ್ತಾಳೆ' ಎಂದ ಪುರುಷೋತ್ತಮರು ಮಗಳ ತಲೆ ಸವರಿದಾಗ ಅವಳಿಗೂ ನಿರಾಳವಾಯಿತು. ತಂದೆ ತನ್ನ ಬೆಂಬಲಕ್ಕೆ ಇರಬೇಕಾದರೆ ಮತ್ತ್ಯಾರ ಬಗೆಗೂ ತಲೆಕೆಡಿಸಿಕೊಳ್ಳುವುದು ಬೇಡವೆನಿಸಿತು. ಆದರೂ ಹೇಮಂತ ಇಲ್ಲಿಗೆ ಬರಲು ಆರಂಭಿಸಿದ ಮೇಲೆ ಬಂಗಲೆಯಲ್ಲಿ ವಿಪರೀತಗಳು ನಡೆಯತೊಡಗಿವೆ. ಇದಕ್ಕೆ ಕಲಾವತಿಯೇ ಕಾರಣವಿರಬಹುದೆಂದು ಹೇಮಂತ ಹಾಗೂ ರಮ್ಯ ನೇರವಾಗಿಯೇ ಆರೋಪಿಸುತ್ತಾರೆ. ಇದು ನಿಜವೇ?....ಚಿಕ್ಕಮ್ಮನ ಇನ್ನೊಂದು ಮುಖ ಕರಾಳವಾಗಿದೆಯೇ? ಮೊದಲ ಬಾರಿಗೆ ಚಿಕ್ಕಮ್ಮನ ಮೇಲೆ ಋತುವಿನ ಸಂದೇಹದ ನೆರಳಾಡತೊಡಗಿತ್ತು.

* * *

## ಋತುವಿನ ಕನಸು

ಆ ರಾತ್ರಿ ಗುಡ್‌ನೈಟ್ ಹೇಳುವುದಕ್ಕೂ ಕಲಾವತಿ ಋತುವಿನ ರೂಮಿಗೆ ಬರಲಿಲ್ಲ. ಸ್ನೇಹಿತೆಯರಿಬ್ಬರೂ ಸ್ವಲ್ಪ ಹೊತ್ತು ಬಾಲ್ಕನಿಯಲ್ಲಿ ಇಂದಿನ ಘಟನೆಯ ಬಗ್ಗೆಯೇ ಮಾತನಾಡುತ್ತಿದ್ದು ನಂತರ ಬಂದು ಮಲಗಿಕೊಂಡರು.

ಸ್ವಲ್ಪ ಹೊತ್ತಿನ ನಂತರ ಋತುವಿಗೆ ಗಾಢ ನಿದ್ರೆ ಹತ್ತಿತು. ಬೆಳಗಿನ ಜಾವದಲ್ಲಿ ಅವಳಿಗೊಂದು ವಿಚಿತ್ರವಾದ ಕನಸು ಬಿತ್ತು. ಕನಸೆಂದರೆ ಪೂರ್ತಿ ಕನಸಿನಂತಲ್ಲ. ನಿಜವೆಂದು ಭ್ರಮೆ ಹುಟ್ಟಿಸುವಂತಹ ಕನಸು. ಒಂದು ಮಟಮಟ ಮಧ್ಯಾಹ್ನದಲ್ಲಿ ಅವಳೊಂದು ದೊಡ್ಡದಾದ ಬೆಟ್ಟದ ಮೇಲಿದ್ದಾಳೆ. ಹಸಿರಿನ ಕುರುಹುಗಳೇ ಇಲ್ಲದ ಬಂಜರು ಕಲ್ಲಿನ ಬೆಟ್ಟವದು. ಬೆಟ್ಟದಲ್ಲಿ ಒಂದು ಪುರಾತನವಾದ ದೇವಾಲಯವೊಂದು ಕಾಣುತ್ತಿದೆ. ನಿರ್ಮಾನುಷವಾದ ಆ ದೇವಾಲಯದ ಬಾಗಿಲುಗಳು ತೆರೆದುಕೊಂಡಿವೆ. ಋತು ಹೆದರುತ್ತಲೇ ಒಳಗಡಿ ಇಟ್ಟಿದ್ದಾಳೆ. ಕಲ್ಲಿನ ಆ ಭವ್ಯ ದೇವಾಲಯದಲ್ಲಿ ಒಂದು ನರಪಿಳ್ಳೆಯೂ ಇಲ್ಲ. ಕಾಲಿಟ್ಟರೆ ಬರೀ ಧೂಳು. ಗರ್ಭಗುಡಿಯಲ್ಲಿ ಶಿವಲಿಂಗವೊಂದನ್ನು ನೋಡುತ್ತಿದ್ದಾಳೆ ಅವಳು. ಲಿಂಗದ ಮೇಲೆಲ್ಲಾ ಜೇಡ ಬಲೆ ಕಟ್ಟಿದೆ. ಯಾವುದೇ ಪೂಜೆ ಪುನಸ್ಕಾರಗಳಿಲ್ಲದೆ ಆ ಲಿಂಗ ಧೂಳಿನ ಅಭಿಷೇಕದಲ್ಲೇ ಮಿಂದಿದೆ. ಆದರೂ ಆ ಲಿಂಗದ ಗಂಭೀರತೆ ಅವಳ ಮನಸ್ಸನ್ನು ತಟ್ಟುತ್ತಿದೆ. ತನಗರಿವಿಲ್ಲದೆ ಕೈ ಮುಗಿದು ನಿಂತಿದ್ದಾಳೆ. ಭಕ್ತಿ ಅವಳ ನರನಾಡಿಗಳನ್ನು ವ್ಯಾಪಿಸತೊಡಗಿದಂತೆ ಯಾರೋ ದೇವಾಲಯದ ಹೊರಗಿನಿಂದ ಚೀರಿದ ಅನುಭವವಾಗುತ್ತಿದೆ. ಒಂದೇ ಉಸಿರಿಗೆ ಹೊರಗೆ ಓಡುತ್ತಾಳೆ ಅವಳು. ಚೀರುವಿಕೆ ದೇವಾಲಯದ ಹೊರಗಿನ ಬಾವಿಯೊಂದರಿಂದ ಬರುತ್ತಿದೆ. ಹತ್ತಿರ ಹೋಗಿ ನೋಡುತ್ತಿದ್ದಾಳೆ ಅವಳು. ಬಾವಿ ಪೂರ್ತಿ ಪಾಳು ಬಿದ್ದಿದೆ. ಸಾಕಷ್ಟು ಮಣ್ಣು ಮರಳು ಬಾವಿಯಲ್ಲಿ ತುಂಬಿದೆ. ಒಳಗೆ ಕೊಳಕು ಸೀರೆಯುಟ್ಟ ಒಂದು ಆಕೃತಿ.... ತಲೆಗೂದಲನ್ನು ಉದ್ದವಾಗಿ ಇಳಿಬಿಟ್ಟ ಒಂದು ಹೆಂಗಸು....ಸಹಾಯಕ್ಕಾಗಿ ಚೀರುತ್ತಿದ್ದಾಳೆ. ಇವಳೇಕೆ ಬೆಟ್ಟಕ್ಕೆ ಬಂದಳು? ಹೇಗೆ ಬಾವಿಯಲ್ಲಿ ಬಿದ್ದಳು? ಯೋಚಿಸುತ್ತಿದ್ದಾಳೆ ಋತು. ಅವಳಿಗೇನಾದರೂ ಸಹಾಯ ಮಾಡ ಬೇಕೆನಿಸುತ್ತಿದೆ. ಆದರೆ ಆಳವಾದ ಬಾವಿಯಲ್ಲಿರುವ ಅವಳಿಗೆ ಯಾವ ರೀತಿಯಲ್ಲಿ ಸಹಾಯ ಮಾಡಬೇಕೆಂಬುದು ತಿಳಿಯುವುದಿಲ್ಲ. ತೀವ್ರವಾದ ಆಲೋಚನೆಯಲ್ಲಿ ಮುಳುಗಿರುವಾಗ ಆ ಸ್ತ್ರೀ ಆಕೃತಿ ತಲೆ ಎತ್ತಿ ನೋಡುತ್ತದೆ. ಆಕೆಯ ಕರುಣಾಜನಕ ಮುಖ, ಏನೋ ಹೇಳಲು ಕಾತರಿಸುವಂತಹ ಕಣ್ಣುಗಳು....ಆ ಮುಖವನ್ನು ಎಲ್ಲಿಯೋ ನೋಡಿದಂತೆನಿಸುತ್ತಿದೆ ಋತುವಿಗೆ. ತಟ್ಟನೆ ನೆನಪಿಗೆ ಬರುವುದಿಲ್ಲ. ಚಿರಪರಿಚಿತವೆಂದೆನಿಸುವ ಆ ಮುಖ ಯಾರದು?....ನಿಧಾನವಾಗಿ ನೆನಪಾಗತೊಡಗುತ್ತದೆ. ಅದು....ತನ್ನ ಹೆತ್ತ ತಾಯಿಯಲ್ಲವೆ?....ಆ ಮುಖದ ಗುರುತು ಹತ್ತಿದಾಗ ಜೋರಾಗಿ ಚೀರಿಕೊಂಡಳು ಋತು.

ಋತು ಏನಾಯ್ತೇ?.....ಕೆಟ್ಟ ಕನಸು ಕಂಡ್ಯೇನೇ, ಕಣ್ಬಿಟ್ಟು ನೋಡೇ.... ಪಕ್ಕದಲ್ಲೇ ಮಲಗಿದ್ದ ರಮ್ಯ ಎಚ್ಚರಿಸುತ್ತಿದ್ದಾಳೆ. ಅಂದರೆ ಇದುವರೆಗೆ ತಾನು ಕಂಡಿದ್ದು ಕನಸು....ಆದರೆ ಅದನ್ನು ಕನಸೆಂದು ನಂಬಲಾಗುತ್ತಿಲ್ಲ. ಎಂದೋ ಚಿಕ್ಕ ವಯಸ್ಸಿನಲ್ಲಿ ತನ್ನೊಂದಿಗೆ ಫೋಟೋ ತೆಗೆಸಿಕೊಂಡಿದ್ದ ಅಮ್ಮನ ಭಾವಚಿತ್ರವೊಂದನ್ನು ಬಿಟ್ಟರೆ ಅವಳನ್ನು ನೆನಪಿಸುವಂತಹ ಮತ್ತ್ಯಾವುದೇ ಕುರುಹುಗಳನ್ನು ತಂದೆ ಉಳಿಸಿಲ್ಲ. ಆ ಭಾವಚಿತ್ರವೂ ತಂದೆಯ ಕಣ್ತಪ್ಪಿಸಿ ತನ್ನ ಬಳಿ ಬಂದದ್ದು. ಎಂದೋ ಕಬೋರ್ಡ್‌ನಲ್ಲಿ ಅದನ್ನು ಸೇರಿಸಿದ ಮೇಲೆ ಮತ್ತೆಂದೂ ತೆಗೆದು ನೋಡಿಲ್ಲ. ಜೊತೆಗೆ ತನ್ನ ಹುಟ್ಟುಹಬ್ಬದ ದಿನವೇ ಓಡಿಹೋದ ಅಮ್ಮನ ಬಗ್ಗೆ ತನಗೆ ಆಕ್ರೋಶವಿದೆ. ಹೀಗಿರುವಾಗ ಈ ರೀತಿಯ ಕನಸು ಬೀಳುವುದೆಂದರೆ....ಒಂದು ರೀತಿಯ ವಿಚಿತ್ರವೇ. ಜೊತೆಗೆ ಅಮ್ಮನ ಮುಖವನ್ನು ನೋಡಿ ತಾನು ವ್ಯಗ್ರಳಾಗಬೇಕಿತ್ತು. ಆದರೆ ಹಾಗೇನೂ ಆಗದೆ ಕರುಣೆಯುಕ್ಕಿದೆ. ಇದೆಂಥ ವಿಚಿತ್ರ ಕನಸು.. ಕಣ್ಮುಚ್ಚಿಕೊಂಡೇ ಯೋಚಿಸ ತೊಡಗಿದ್ದಳು ಋತು.

ಅವಳೇನೂ ಮಾತನಾಡದಿದ್ದಾಗ ರಮ್ಯಾಳಿಗೆ ಮತ್ತಷ್ಟು ಆತಂಕವಾಯಿತು. 'ಋತು....ಏಳೇ, ಕೆಟ್ಟ ಕನಸು ಕಂಡ್ಯಾ?' ಎಂದವಳೇ ಗೆಳತಿಯನ್ನೆಬ್ಬಿಸಿ